KAVP210000552015

Presented on : 13-07-2015
Registered on : 13-07-2015
Decided on : 23-07-2026

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಬಸವನ ಬಾಗೇವಾಡಿ .**

**-:ಉಪಸ್ಥಿತರು:-**

ಶ್ರೀ ಈರಪ್ಪ ಢವಳೇಶ್ವರ್ ಬಿ.ಎ. ಎಲ್.ಎಲ್.ಬಿ,
**1** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಬಸವನ ಬಾಗೇವಾಡಿ .

ಅಸಲು ದಾವಾ ಸಂಖ್ಯೆಃ **352 /2015**

ದಿನಾಂಕಃ **23** ನೇ ಜುಲೈ **2026**

ವಾದಿ/ಯರುಃ

1) ರಂಗಪ್ಪ ತಂ ಬಾಲಪ್ಪ ಹಡಪದ ಉರ್ಫ ನಾದಗೇರ ಮೃತ,
ಮೃತನ ವಾರಸುದಾರರು

1 ಎ) ಕಮಲಾಬಾಯಿ ಗಂ. ರಂಗಪ್ಪ ಹಡಪದ @ ನಾದಗೇರ,
ವಯಾ: 50 ವರ್ಷ, ಉದ್ಯೋಗ: ಮನೆಗೆಲಸ,
ಸಾ॥ ಸಿಂದಗಿ, ಜಿ॥ ವಿಜಯಪುರ

1 ಬಿ) ಸಂತೋಷ ತಂ. ರಂಗಪ್ಪ ಹಡಪದ @ ನಾದಗೇರ,
ವಯಾ: 30 ವರ್ಷ, ಉದ್ಯೋಗ: ವ್ಯಾಪಾರ,
ಸಾ|| ಸಿಂದಗಿ, ಜಿ|| ವಿಜಯಪುರ

1 ಸಿ) ಪ್ರಕಾಶ ತಂ. ರಂಗಪ್ಪ ಹಡಪದ @ ನಾದಗೇರ,
ವಯಾ: 24 ವರ್ಷ, ಉದ್ಯೋಗ: ವ್ಯಾಪಾರ,
ಸಾ॥ ಸಿಂದಗಿ, ಜಿ।। ವಿಜಯಪುರ

1 ಡಿ) ಶ್ರೀಮತಿ ಕಾವೇರಿ @ ಮಂಜುಳಾ ಗಂ. ಚಂದ್ರಶೇಖರ ಹಡಪದ,
ವಯಾ: 26 ವರ್ಷ, ಉದ್ಯೋಗ: ಮನೆಗೆಲಸ,
ಸಾ॥ ಸಿಂದಗಿ, ಜಿ॥ ವಿಜಯಪುರ

2) ನಿಂಗವ್ವ ಗಂ ಲಕ್ಷ್ಮಣ ಹಡಪದ
ವಯಾ-30 ವರ್ಷ, ಉದ್ಯೋಗ: ಮನೆಗೆಲಸ
ಸಾ॥ ಬೇಕಿನಾಳ ತಾಲೂಕ-ಸಿಂದಗಿ

3) ಮಾಂತವ್ವ ಗಂ ಸಂಗಪ್ಪ ಹಡಪದ
ವಯಾ-28 ವರ್ಷ, ಉದ್ಯೋಗ: ಮನೆಗೆಲಸ
ಸಾ॥ ಬೇಕಿನಾಳ, ತಾಲೂಕ- ಸಿಂದಗಿ

(ಪ್ರತಿನಿಧಿಸುವವರುಃ ಶ್ರೀ ಎಸ್ . ಆರ್ .ಜಿ. ನ್ಯಾಯವಾದಿಗಳು)

- ವಿರುದ್ಧ -

ಪ್ರತಿವಾದಿ/ಯರುಃ

1)ಬಾಲಪ್ಪ ತಂದೆ ಭೀಮಪ್ಪ ಹಡಪದ ಉರ್ಫ ನಾದಗೇರ
ವಯಾ-65, ಉದ್ಯೋಗ: ಒಕ್ಕಲುತನ
ಸಾಃಉಕ್ಕಲಿ, ತಾಲೂಕ -ಬಸವನಬಾಗೇವಾಡಿ

2)ಮಲ್ಲಪ್ಪ ತಂದೆ ಬಾಲಪ್ಪ ಹಡಪದ ಉರ್ಫ ನಾದಗೇರ
ವಯಾ-32, ಉದ್ಯೋಗ: ಒಕ್ಕಲುತನ
ಸಾಃ ಉಕ್ಕಲಿ, ತಾ-ಬಸವನಬಾಗೇವಾಡಿ

3)ಅಣ್ಣಾ ಸಾಹೇಬ ತಂದೆ ಆಗುಬಾ ಗಾಯಕವಾಡ
ವಯಾ-48 ಉದ್ಯೋಗ: ಒಕ್ಕಲುತನ
ಸಾ:ಉಕ್ಕಲಿ, ತಾ-ಬಸವನಬಾಗೇವಾಡಿ

4) ಪ್ರಕಾಶ ತಂದೆ ಅಂಬಣ್ಣಾ ಕಲ್ಬುರ್ಗಿ
ವಯಾ-55 ವರ್ಷ, ಉದ್ಯೋಗ: ಮನೆಗೆಲಸ
ಸಾ: ಸ್ಪಿನ್ನಿಂಗ್ ಮಿಲ್ಸ್ ರಸ್ತೆ ರೈಲ್ವೆಸ್ಟೇಶನ್, ವಿಜಯಪುರ
ತಾ.ಜಿ.ವಿಜಯಪುರ

(2 ನೇ ಪ್ರತಿವಾದಿಯನ್ನು ಪ್ರತಿನಿಧಿಸುವವರು: ಶ್ರೀ ಕೆ.ವಾಯ್.ಬಿ. ನ್ಯಾಯವಾದಿಗಳು)

(1 ಮತ್ತು 3 ನೇ ಪ್ರತಿವಾದಿಯರು ಏಕಪಕ್ಷೀಯ)

| | | | | |
|---|---|---|---|---|
| 1 | ದಾವಾ ದಾಖಲಿಸಿದ ದಿನಾಂಕ | 13-07-2015 | | |
| 2 | ದಾವಾ ಸ್ವರೂಪ | ಪಾಲುವಾಟ್ನಿ | | |
| 3 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 07-02-2025 | | |
| 4 | ತೀರ್ಪನ್ನು ಉದ್ಘೋಷಿಸಿದ ದಿನಾಂಕ | 23-07-2026 | | |
| 5 | ತೆಗೆದುಕೊಂಡ ಅವಧಿ | ವರ್ಷ | ತಿಂಗಳು | ದಿನಗಳು |
| | | 11 | 00 | 10 |

**-: ತೀರ್ಪು :-**

ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ದಾವಾ ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ತಮ್ಮ ಪಾಲಿನ ತಲಾ 1/5 ಹಿಸ್ಸೆಯನ್ನು ವಾದಿಗಳಿಗೆ ಕೊಡಿಸಿ ಕೊಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

**2.** ವಾದಿಯರ ವಾದಪತ್ರದಲ್ಲಿನ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇದೆಃ-

ಮೂಲ ಪುರುಷ ಬಾಲಪ್ಪ (1 ನೇ ಪ್ರತಿವಾದಿ ) ಇದ್ದು, ಇತನಿಗೆ ದಾನಮ್ಮ ಅಂತ ಹೆಂಡತಿ ಇದ್ದು, ಸದರಿಯವರಿಗೆ ವಾದಿಗಳು ಮತ್ತು 2 ನೇ ಪ್ರತಿವಾದಿಯು ಮಕ್ಕಳುಗಳು ಇರುತ್ತಾರೆ. ಬಸವನ ಬಾಗೇವಾಡಿ ತಾಲೂಕಿನ ಉಕ್ಕಲಿ ಗ್ರಾಮದ ದಾವಾ ಜಮೀನು ಸರ್ವೆ ನಂಃ 167/2 ವಿಸ್ತೀರ್ಣ 04 ಎಕರೆ ಜಮೀನವು ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತಾಗಿದ್ದು, ವಾದಿಯರ ಮತ್ತು 1 ಹಾಗೂರ 2 ನೇ ಪ್ರತಿವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುತ್ತವೆ. ದಾವಾ ಆಸ್ತಿಯು ವಾದಿಯರ ತಾಯಿ ಮೃತಪಟ್ಟ ನಂತರ ಅವರ ನೇರ ವಾರಸುದಾರರ ಹೆಸರಿಗೆ ಆಗಿ ಈ ಕುರಿತು ಡ ನಂಃ 552 ಮಂಜೂರಾಗಿರುತ್ತದೆ. ಆದರೆ 1 ನೇ ಪ್ರತಿವಾದಿಯು ಕಂದಾಯ ಅಧಿಕಾರಿಯೊಂದಿಗೆ ಮಿಲಾಫೆಯಾಗಿ ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ತನ್ನ ಹೆಸರು ಮಾತ್ರ ನಮೂದು ಮಾಡಿಕೊಂಡಿರುತ್ತಾನೆ. ವಾದಿಯರ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಕುಟುಂಬದಲ್ಲಿ ದಾವಾ ಆಸ್ತಿಯ ಕುರಿತು ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ . ಹಿಗಿದಾಗ್ಯೂ ಸಹ 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿರುವ ವಾದಿಯರ ಹಿಸ್ಸೆಯನ್ನು ಎತ್ತಿ ಹಾಕಬೇಕೆಂದ ದುರುದ್ದೇಶದಿಂದ ವಾದಿಯರಿಗೆ ಗೊತ್ತಿಲ್ಲದಂತೆ ದಾವಾ ಆಸ್ತಿಯನ್ನು ಮಾರಾಟಕ್ಕೆ ತೆಗೆದಿದ್ದು ಈ ಕುರಿತು ಬೇರೆ ಜನರನ್ನು ಕರೆದುಕೊಂಡು ಬಂದು ದಾವಾ ಆಸ್ತಿಯನ್ನು ತೋರಿಸುತ್ತಿರುವಾಗ ವಾದಿಯರಿಗೆ ವಿಷಯ ಗೊತ್ತಾಗಿ 1 ನೇ ಪ್ರತಿವಾದಿಯನ್ನು ವಿಚಾರಿಸಿದಾಗ ದಾವಾ ಆಸ್ತಿಯು ತನ್ನ ಹೆಸರಿನಲ್ಲಿದೆ ತಾನು ಎನು ಬೇಕಾದರೂ ಮಾಡುತ್ತೇನೆ ಮತ್ತು ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ವಾದಿಯರು ಊರ ಹಿರಿಯರ ಮುಖಾಂತರ 1 ನೇ ಪ್ರತಿವಾದಿಗೆ ತಮ್ಮ ಪಾಲಿನ ಹಿಸ್ಸೆ ನೀಡುವಂತೆ ಕೇಳಿದಾಗ 1 ನೇ ಪ್ರತಿವಾದಿಯು ಹಿಸ್ಸೆಯನ್ನು ನೀಡಲು ನಿರಾಕರಿಸಿರುತ್ತಾರೆ. ಈ ದಾವೆ ಚಾಲ್ತಿಯಲ್ಲಿರುವಾಗ 1 ನೇ ಪ್ರತಿವಾದಿಯು ದಿಃ 20-08-2016 ರಂದು 3 ನೇ ಪ್ರತಿವಾದಿಯ ಪರವಾಗಿ ಒಂದು ಖೊಟ್ಟಿ ಖರೀದಿ ಪತ್ರ ಬರೆದುಕೊಟ್ಟಿದು , ಸದರಿ ಖರೀದಿ ಪತ್ರವು ವಾದಿಯರ ನ್ಯಾಯೋಚಿತ ಹಕ್ಕಿನ ಮೇಲೆ ಯಾವುದೇ ರೀತಿಯ

ಬಂಧನಕಾರಕವಾಗುವುದಿಲ್ಲ. ಆದ್ದರಿಂದ ವಾದಿಯರು ಈ ದಾವೆಯನ್ನು ಸಲ್ಲಿಸಿದ್ದು ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

**3.** ಈ ಪ್ರಕರಣದಲ್ಲಿ ವಾದಿಯರು ದಾವೆಯನ್ನು ದಾಖಲಿಸಿಕೊಂಡ ನಂತರ ಪ್ರತಿವಾದಿಯರಿಗೆ ನ್ಯಾಯಾಲಯದ ಮೂಲಕ ನೋಟೀಸನ್ನು ಜಾರಿಗೊಳಿಸಿದ್ದು, ಸದರಿ ನೋಟೀಸನ್ನು ಪ್ರತಿವಾದಿಯರು ಸ್ವೀಕರಿಸಿರುತ್ತಾರೆ. **1** ಮತ್ತು **3** ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿರುವದಿಲ್ಲ ಕಾರಣ ಅವರನ್ನು ಏಕತರ್ಫೆ ಎಂದು ಆದೇಶಿಸಲಾಗಿರುತ್ತದೆ. **2** ನೇ ಪ್ರತಿವಾದಿಯು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ಯಾವುದೇ ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ.

**4**. ಮಾನ್ಯ ವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5**. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ.

<u>ಅಂಶಗಳು</u>

1. ವಾದಿಯರು ಮತ್ತು 1 ಹಾಗೂ 2 ನೇ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರೆಂದು ಮತ್ತು ದಾವಾ ಅನುಸೂಚಿತ ಸ್ವತ್ತು ತಮ್ಮ ಒಟ್ಟು ಕುಟುಂಬದ ಸ್ವತ್ತು ಎಂದು ವಾದಿಯರು ಸಾಬೀತುಪಡಿಸುತ್ತಾರೆಯೇ?
2. ವಾದಿಯರು ಈ ದಾವೆಯಲ್ಲಿ ಕೋರಿರುವಂತೆ ಪರಿಹಾರಗಳನ್ನು ಪಡೆಯಲು ಅರ್ಹರೇ?
3. ಹಾಗಿದ್ದರೆ ಯಾವ ಆದೇಶ ಅಥವಾ ಡಿಕ್ರಿ?

**6.** ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ವಾದಿ ನಂ: 1(ಸಿ) ರವರು ತನ್ನನ್ನು ತಾನು ಪಿ.ಡಬ್ಲ್ಯೂ .1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಪರವಾಗಿ ನಿಪಿ.1 ರಿಂದ ನಿಪಿ-4 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ಗುರ್ತಿಸಿಕೊಂಡಿರುತ್ತಾರೆ. ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ಪಿ.ಡಬ್ಲ್ಯೂ.1 ರವರನ್ನು ಪಾಟೀ ಸವಾಲು ಮಾಡಿರುವುದಿಲ್ಲ.

**7.** ಮೇಲ್ಕಾಣಿಸಿದ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿರುತ್ತದೆ:-

ಅಂಶ ಸಂಖ್ಯೆ -1 ಃ- ಸಕಾರಾತ್ಮಕ

ಅಂಶ ಸಂಖ್ಯೆ -2 ಃ- ಭಾಗಶಃ ಸಕಾರಾತ್ಮಕ

ಅಂಶ ಸಂಖ್ಯೆ - 3 ಃ- ಅಂತಿಮ ಆದೇಶದಂತೆ

ಕಾ ರ ಣ ಗ ಳು

**8.** <u>ಅಂಶ ಸಂಖ್ಯೆ **-1** ಮತ್ತು **2**ಃ-</u> ಈ ಎರಡು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದಲೂ ಮತ್ತು ಇವುಗಳಿಗೆ ನೀಡುವ ಕಾರಣಗಳು ಒಂದೇ ರೀತಿ ಇರುವುದರಿಂದಲೂ ಇವುಗಳನ್ನು ಒಟ್ಟಿಗೆ ಚರ್ಚಿಸಲಾಗಿರುತ್ತದೆ.

**9.** ಈ ಅಂಶಗಳ ಕುರಿತು ವಾದಿಯರು ತಮ್ಮ ವಾದಪತ್ರದಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿರುತ್ತಾರೆ:-

ಮೂಲ ಪುರುಷ ಬಾಲಪ್ಪ ಇದ್ದು, ಸದರಿ ಬಾಲಪ್ಪನಿಗೆ ದಾನಮ್ಮ ಅಂತ ಹೆಂಡತಿ ಇದ್ದು, ಸದರಿಯವರುಗಳಿಗೆ ವಾದಿಗಳು ಮತ್ತು 2 ನೇ ಪ್ರತಿವಾದಿಯು ಮಕ್ಕಳುಗಳು ಇರುತ್ತಾರೆ. ಉಕ್ಕಲಿ ಗ್ರಾಮದ ದಾವಾ ಜಮೀನು ಸರ್ವೆ ನಂ: 167/2 ವಿಸ್ತೀರ್ಣ 04 ಎಕರೆ ಜಮೀನುವು ವಾದಿಯರು ಮತ್ತು 1 ಮತ್ತು 2 ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತಾಗಿದ್ದು, ವಾದಿಯರು ಮತ್ತು 1 ಮತ್ತು 2 ಪ್ರತಿವಾದಿಯರ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುತ್ತದೆ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು , ಸದರಿ 1 ನೇ ಪ್ರತಿವಾದಿಯು ಬೇರೆಯವರ ಮಾತು ಕೇಳಿಕೊಂಡು

ವಾದಿಗಳಿಗೆ ಗೊತ್ತಾಗದಂತೆ ದಾವಾ ಆಸ್ತಿಯನ್ನು ಮಾರಾಟ ಮಾಡುವ ತಜಿವಿಜಿಯಲ್ಲಿ ಇರುತ್ತಾನೆ. ವಾದಿಯರು ಹಿರಿಯರ ಮುಖಾಂತರ 1 ನೇ ಪ್ರತಿವಾದಿಗೆ ತಮ್ಮ ಪಾಲಿನ ಹಿಸ್ಸೆ ನೀಡುವಂತೆ ಕೇಳಿದಾಗ 1 ನೇ ಪ್ರತಿವಾದಿಯು ಹಿಸ್ಸೆಯನ್ನು ನೀಡಲು ನಿರಾಕರಿಸಿರುತ್ತಾರೆ. ಹಾಗಾಗಿ ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದು ಹೇಳಿರುತ್ತಾರೆ.

**10**. ಈ ಮೇಲ್ಕಾಣಿಸಿದ ಅಂಶಗಳಿಗೆ ಪೂರಕವಾಗಿ ವಾದಿ ನಂ: 1(ಸಿ) ರವರು ತನ್ನನ್ನು ತಾನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಸದರಿ ತನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ. ಪಿ.ಡಬ್ಲ್ಯೂ-1 ರವರು ತಮ್ಮ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ.1 ರಿಂದ ನಿಪಿ.4 ದಾಖಲಾತಿಗಳನ್ನು ನಿಶಾನಿಸಿರುತ್ತಾರೆ.

ನಿಪಿ.1 ರಂತೆ ಜಮೀನಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಉಕ್ಕಲಿ ಗ್ರಾಮದ ಸರ್ವೆ ನಂ: 167/2 ಕ್ಷೇತ್ರ 04 ಎಕರೆ ಪಹಣಿ ಪತ್ರಿಕೆಯ ಕಬ್ಜೆ ಮತ್ತು ಸ್ವಾಧೀನದಾರರ ಹೆಸರು ಕಾಲಂನಲ್ಲಿ ಬಾಲಪ್ಪ ಭೀಮಪ್ಪ ನಾಯಿದರರವರ ಹೆಸರು ಎಮ್ ಆರ್ ಟಿ 637/2013-14 ದಿ: 21-06-2014 ರ ವಿಭಜನೆ ಮೂಲಕ ನಮೂದಾಗಿರುವುದು ಕಂಡು ಬರುತ್ತದೆ. ನಿಪಿ-2 ರಂತೆ ಹಕ್ಕು ಬದಲಾವಣೆ ವಹಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಡ ನಂ: 552 ವಾರಸಾ ದಾಖಲ ತಾರೀಖ 04-10-1997 ಬಾಜುಕ್ಕೆ ಬರೆದ ಸರ್ವೆ ನಂಬರವು ಭೀಮಪ್ಪ , 2) ಗುರುಪಾದಪ್ಪ ತಂದೆ ನಂದಪ್ಪ ಹಡಪದ , 3) ಪದಮವ್ವ ಗಂಡ ಟಂಕಪ್ಪ ಮನಗೂಳಿ, 4) ದಾನಮ್ಮ ಗಂಡ ಬಾಲಪ್ಪ ಹಡಪದ ಅಂತಾ ಇದ್ದು ಸದರಿಯವರಲ್ಲಿ ನಂ: 4 ನೇ ರವರಾದ ದಾನಮ್ಮ ಗಂಡ ಬಾಲಪ್ಪ ಹಡಪದರವರು ದಿ: 24-08-97 ರಂದು ಮೃತವಾಗಿದ್ದು, ಮೃತರ ನೇರ ವಾರಸುದಾರರು 1) ಬಾಲಪ್ಪ

ಭೀಮಪ್ಪ ಹಡಪದ, 2) ರಂಗಪ್ಪ, 3) ಮಲ್ಲಪ್ಪ ತಂದೆ ಬಾಲಪ್ಪ ಹಡಪದ , 4) ನಿಂಗಮ್ಮ ಲಕ್ಷ್ಮಣ ಹಡಪದ, 5) ಮಾಂತವ್ವ ಸಂಗಪ್ಪ ಹಡಪದ ಅಂತಾ 5 ಜನ ವಾರಸಾದಾರರಿದ್ದು ಮೃತರ ಹೆಸರನ್ನು ಕಡಿಮೆ ಮಾಡಿ ವಾರಸುದಾರರ ಹೆಸರು ದಾಖಲ ಮಾಡಲು ಬಂದ ವಾರ್ಸಾ ವರದಿ ಪ್ರಕಾರ ದಾಖಲ ಮಾಡಿತು ಎಂದು ನಮೂದು ಇರುವುದು ಕಂಡು ಬರುತ್ತದೆ.

ನಿಪಿ-3 ರಂತೆ ಒಂದು ಕ್ರಯ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ಕ್ರಯ ಪತ್ರವನ್ನು ಪರಿಶೀಲಿಸಿದಾಗ ದಿಃ 29-01-2016 ರಂದು ಬಾಲಪ್ಪ ತಂದೆ ಭೀಮಪ್ಪ ನಾಯಿದರರವರು ಅಣ್ಣಾಸಾಹೇಬ ತಂದೆ ಆಗುಬಾ ಗಾಯಕವಾಡರವರ ಪರವಾಗಿ ದಾವಾ ಆಸ್ತಿ ಸರ್ವೆ ನಂಃ 167/2 ಕ್ಷೇತ್ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ನಿಪಿ-4 ರಂತೆ ಒಂದು ಕ್ರಯ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ಕ್ರಯ ಪತ್ರವನ್ನು ಪರಿಶೀಲಿಸಿದಾಗ ದಿಃ 29-01-2016 ರಂದು ಅಣ್ಣಾಸಾಹೇಬ ತಂದೆ ಆಗುಬಾ ಗಾಯಕವಾಡ ರವರು ಪ್ರಕಾಶ ತಂದೆ ಅಮ್ಮಣ್ಣ ಕಲಬುರ್ಗಿ ರವರ ಪರವಾಗಿ ದಾವಾ ಆಸ್ತಿ ಸರ್ವೆ ನಂಃ 167/2 ಕ್ಷೇತ್ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತದೆ.

11. ವಾದಿಯ ವಾದ ಪತ್ರವನ್ನುಪರಿಶೀಲಿಸಿದಾಗ ಮೂಲ ಪುರುಷ 1 ನೇ ಪ್ರತಿವಾದಿ ಇದ್ದು, ಸದರಿ 1 ನೇ ಪ್ರತಿವಾದಿ ಮತ್ತು ದಾನಮ್ಮ ರವರು ಗಂಡ-ಹೆಂಡತಿಯಾಗಿರುವುದು ಮತ್ತು ವಾದಿಗಳು ಮತ್ತು2 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಮತ್ತು ದಾನಮ್ಮರವರ ಮಕ್ಕಳುಗಳಾಗಿರುವುದು ಕಂಡು ಬರುತ್ತದೆ. ಅದೇ ರೀತಿಯಾಗಿ ನಿಶಾನೆ ಪಿ.1.ರಂತೆ ದಾವಾ ಅನುಸೂಚಿ ರ ಸ್ವತ್ತಿಗೆ ಸಂಬಂಧಿಸಿದ ಉಕ್ಕಲಿ ಗ್ರಾಮದ ಸರ್ವೆ ನಂಬರ್ 167/2 ರ 2014-2015 ನೇ ಸಾಲಿನ ಪಹಣಿಯನ್ನು ಹಾಜರುಪಡಿಸಿದ್ದು, ಅದರಂತೆ 04 ಎಕರೆ ಜಮೀನು ಎಂ.ಆರ್.ಟಿ 637/2013-14 ರ ದಿಃ 21-06-2014 ರಲ್ಲಿ ಆದ ವಿಭಜನೆಯಂತೆ ಬಾಲಪ್ಪ ಭೀಮಪ್ಪ ನಾಯಿಧರರವರ ಹೆಸರಲ್ಲಿ ನಮೂದಾಗಿರುವುದು ಕಂಡುಬರುತ್ತದೆ. ನಿಪಿ-2 ರಂತೆ ಹಕ್ಕು ಬದಲಾವಣೆ

ವಹಿಯ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು, ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಡ ನಂ: 552 ವಾರಸಾ ದಾಖಲ ತಾರೀಖ 04-10-1997 ಬಾಜುಕ್ಕೆ ಬರೆದ ಸರ್ವೆ ನಂಬರವು ಭೀಮಪ್ಪ , 2) ಗುರುಪಾದಪ್ಪ ತಂದೆ ನಂದಪ್ಪ ಹಡಪದ , 3) ಪದಮವ್ವ ಗಂಡ ಟಂಕಪ್ಪ ಮನಗೂಳಿ, 4) ದಾನಮ್ಮ ಗಂಡ ಬಾಲಪ್ಪ ಹಡಪದ ಅಂತಾ ಇದ್ದು ಸದರಿಯವರಲ್ಲಿ ನಂ: 4 ನೇ ರವರಾದ ದಾನಮ್ಮ ಗಂಡ ಬಾಲಪ್ಪ ಹಡಪದರವರು ದಿ: 24-08-97 ರಂದು ಮೃತವಾಗಿದ್ದು, ಮೃತರ ನೇರ ವಾರಸುದಾರರು 1) ಬಾಲಪ್ಪ ಭೀಮಪ್ಪ ಹಡಪದ, 2) ರಂಗಪ್ಪ, 3) ಮಲ್ಲಪ್ಪ ತಂದೆ ಬಾಲಪ್ಪ ಹಡಪದ , 4) ನಿಂಗಮ್ಮ ಲಕ್ಷ್ಮಣ ಹಡಪದ, 5) ಮಾಂತವ್ವ ಸಂಗಪ್ಪ ಹಡಪದ ಅಂತಾ 5 ಜನ ವಾರಸಾದಾರರಿದ್ದು ಮೃತರ ಹೆಸರನ್ನು ಕಡಿಮೆ ಮಾಡಿ ವಾರಸುದಾರರ ಹೆಸರು ದಾಖಲ ಮಾಡಲು ಬಂದ ವಾರ್ಸಾ ವರದಿ ಪ್ರಕಾರ ದಾಖಲ ಮಾಡಿತು ಎಂದು ನಮೂದು ಇರುವುದು ಕಂಡು ಬರುತ್ತದೆ.

**12.** ವಾದಿಯರು ದಾವಾ ಅನುಸೂಚಿತ ಸ್ವತ್ತು ವಾದಿಯರ ಮತ್ತು1 ಮತ್ತು 2 ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತಾಗಿದ್ದು , ಸದರಿ ಸ್ವತ್ತಿನಲ್ಲಿ ತಮ್ಮ ಪಾಲಿನ ಹಿಸ್ಸೆ ಇರುತ್ತದೆ ಎಂದು ಹಾಗೂ ತಮ್ಮ ಪಾಲಿನ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನತೆಯನ್ನು ಕೊಡಿಸಿಕೊಡುವಂತೆ ಕೋರಿರುತ್ತಾರೆ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಹಾಗೂ ಯಾವುದೇ ಪ್ರತಿವಾದ ಪತ್ರಗಳನ್ನು ಸಹ ಸಲ್ಲಿಸಿರುವುದಿಲ್ಲ.

**13.** ವಾದಿಯ ಹಾಜರುಪಡಿಸಿರುವ ನಿಪಿ-1 ಮತ್ತು 2 ರ ಪಹಣಿ ಪತ್ರಿಕೆ ಮತ್ತು ಹಕ್ಕು ಬದಲಾವಣೆ ವಹಿಯ ದೃಡಿಕೃತ ನಕಲನ್ನು ಪರಿಶೀಲಿಸಿದಾಗ ದಾವಾ ಅನುಸೂಚಿ ಸ್ವತ್ತು 1 ನೇ ಪ್ರತಿವಾದಿಯ ಹೆಂಡತಿಯಾದ ದಾನಮ್ಮರವರ ಮರಣಾ ನಂತರ ವಾರಸಾ ಮೂಲಕ ಅವರ ನೇರ ವಾರಸುದಾರಾದ ಬಾಲಪ್ಪ ತಂದೆ ಭೀಮಪ್ಪ ಹಡಪದ 2) ರಂಗಪ್ಪ 3) ಮಲಪ್ಪ ತಂದೆ ಬಾಲಪ್ಪ ಹಡಪದ 4) ನಿಂಗಮ್ಮ ಲಕ್ಷ್ಮಣ ಹಡಪದ 5) ಮಾಂತವ್ವ ಸಂಗಪ್ಪ ಹಡಪದ ಅಂತ ಐದು ಜನರ ಹೆಸರು ವಾರಸಾ ಮೂಲಕ ನಮೂದಾಗಿರುವುದು ಕಂಡು ಬರುತ್ತದೆ ಮತ್ತು ನಿಪಿ-1 ರ ಪಹಣಿ ಪತ್ರಿಕೆಯಲ್ಲಿ 1 ನೇ

ಪ್ರತಿವಾದಿಯ ಹೆಸರು ಮಾತ್ರ ನಮೂದಾಗಿರುವುದು ಕಂಡು ಬರುತ್ತದೆ. ವಾದಿಯರು ಮತ್ತು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಕ್ಕಳುಗಳಾಗಿರುದು ಕಂಡು ಬರುತ್ತದೆ. ದಾನಮ್ಮರವರು ಮೃತಪಟ್ಟ ನಂತರ ದಾವಾ ಆಸ್ತಿಯು ಅವರ ಕಾನೂನು ಬದ್ಧ ವಾರಸುದಾರರಾದ ವಾದಿಯರು ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ಹೋಗಬೇಕಾಗುತ್ತದೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತು ವಾದಿಯರ ಮತ್ತು1 ಮತ್ತು 2 ಪ್ರತಿವಾದಿಯರ ಕುಟುಂಬದ ಸ್ವತ್ತಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೆ ವಾದಿಯರ ಮತ್ತು 1 ಹಾಗೂ 2 ನೇ ಪ್ರತಿವಾದಿಯರ ನಡುವೆ ದಾವಾ ಸ್ವತ್ತಿನ ಕುರಿತು ವಿಭಾಗ ಏರ್ಪಟ್ಟಿರುವ ಬಗ್ಗೆ ಯಾವುದೇ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪ್ರತಿವಾದಿಯರು ಪ್ರಚುರಪಡಿಸಿರುವುದಿಲ್ಲ. ಈ ಮೇಲ್ಕಂಡ ದಾಖಲಾತಿಯನ್ನು ಪರಿಶೀಲಿಸಿದಾಗ ಸ್ಪಷ್ಟವಾಗಿ ದಾವಾ ಅನುಸೂಚಿತ ಸ್ವತ್ತು ವಾದಿಯರಿಗೆ ಮತ್ತು1 ಮತ್ತು 2 ಪ್ರತಿವಾದಿಯರಿಗೆ ವಾರಸಾ ಮೂಲಕ ಬಂದಿರುವುದು ದೃಢೀಕೃತಗೊಳ್ಳುತ್ತದೆ.

**14.** ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ವಾದಿಯರು ಮತ್ತು 1 ಮತ್ತು 2 ಪ್ರತಿವಾದಿಯರ ನಡುವಣ ಸಂಬಂಧದ ಕುರಿತು ಯಾವುದೇ ತಕರಾರು ಇರುವುದಿಲ್ಲ. ಅಂತೆಯೇ ವಾದಿಯರು ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ದಾವಾ ಅನುಸೂಚಿತ ಸ್ವತ್ತು ವಾದಿಯರ ಹಾಗೂ ಪ್ರತಿವಾದಿಯರ ಕುಟುಂಬದ ಸ್ವತ್ತು ಎಂಬುದು ಕಂಡು ಬರುತ್ತದೆ. ಸಿವಿಲ್ ಪ್ರಕರಣಗಳಲ್ಲಿ ರುಜುವಾತು ಪಡಿಸುವಂತಹ ಹೊಣೆಗಾರಿಕೆ ಬಾಹುಳ್ಯತೆ ಸಂಭಾವ್ಯತೆಯಿಂದ ಕೂಡಿದ್ದಾಗಿರುತ್ತದೆ. ಹಾಗಾಗಿ ಈ ಪ್ರಕರಣದಲ್ಲಿ ನಿಪಿ.1 ರಿಂದ 4 ನ್ನು ಖಂಡಿಸಬಹುದಾದಂತಹ ಯಾವುದೇ ದಾಖಲಾತಿಗಳನ್ನು ಪ್ರತಿವಾದಿಯರು ಹಾಜರು ಪಡಿಸದ ಕಾರಣದಿಂದ ದಾವಾ ಅನುಸೂಚಿತ ಸ್ವತ್ತನ್ನು ವಾದಿಯರ ಮತ್ತು 1 ಮತ್ತು 2 ನೇ ಪ್ರತಿವಾದಿಯರ ಕುಟುಂಬದ ಸ್ವತ್ತು ಎಂದು ನ್ಯಾಯಾಲಯಕ್ಕೆ ಕಂಡು ಬರುತ್ತದೆ.

15. ಈ ದಾವೆಯಲ್ಲಿ ವಾದಿಯರು ತಮ್ಮ ವಾದ ಪತ್ರದಲ್ಲಿ ಈ ದಾವೆ ಚಾಲ್ತಿಯಲ್ಲಿರುವಾಗ 1 ನೇ ಪ್ರತಿವಾದಿಯು 20-08-2016 ರಂದು 3 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಆಸ್ತಿಯ ಕುರಿತು ಮಾಡಿಕೊಟ್ಟಿರುವ ಕ್ರಯ ಪತ್ರವು ವಾದಿಯರ

ಹಿಸ್ಸೆಗೆ ಬಂಧನಕಾರಕವಾಗುವುದಿಲ್ಲ ಎಂದು ಹೇಳಿರುತ್ತಾರೆ . ಈ ಕುರಿತು ವಾದಿಯರು ನಿಪಿ-3 ರಂತೆ ಒಂದು ಕ್ರಯ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ಕ್ರಯ ಪತ್ರವನ್ನು ಪರಿಶೀಲಿಸಿದಾಗ ದಿಃ 29-01-2016 ರಂದು ಬಾಲಪ್ಪ ತಂದೆ ಭೀಮಪ್ಪ ನಾಯಿದರರವರು ಅಣ್ಣಾಸಾಹೇಬ ತಂದೆ ಆಗುಬಾ ಗಾಯಕವಾಡರವರ ಪರವಾಗಿ ದಾವಾ ಆಸ್ತಿ ಸರ್ವೆ ನಂಃ 167/2 ಕ್ಷೇತ್ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ನಿಪಿ-4 ರಂತೆ ಒಂದು ಕ್ರಯ ಪತ್ರದ ದೃಡಿಕೃತ ನಕಲನ್ನು ಹಾಜರುಪಡಿಸಿದ್ದು , ಸದರಿ ಕ್ರಯ ಪತ್ರವನ್ನು ಪರಿಶೀಲಿಸಿದಾಗ ದಿಃ 29-01-2016 ರಂದು ಅಣ್ಣಾಸಾಹೇಬ ತಂದೆ ಆಗುಬಾ ಗಾಯಕವಾಡ ರವರು ಪ್ರಕಾಶ ತಂದೆ ಅಮೃಣ್ಣಾ ಕಲಬುರ್ಗಿ ರವರ ಪರವಾಗಿ ದಾವಾ ಆಸ್ತಿ ಸರ್ವೆ ನಂಃ 167/2 ಕ್ಷೇತ್ರ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ನೊಂದಾಯಿತ ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತದೆ.

16. ಈ ಮೇಲಿನ ಪಿ.ಡಬ್ಲೂ-1 ರವರ ಮೌಖಿಕ ಸಾಕ್ಷ್ಯ ಮತ್ತು ನಿಪಿ-3 ಮತ್ತು 4 ರ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಈ ದಾವೆ ಚಾಲ್ತಿಯಲ್ಲಿರುವಾಗ 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಯ ಪರವಾಗಿ ದಿಃ 29-01-2016 ರಂದು ದಾವಾ ಆಸ್ತಿಯ ಕುರಿತು ಕ್ರಯ ಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಮತ್ತು ದಿಃ 29-01-2016 ರಂದು 3 ನೇ ಪ್ರತಿವಾದಿಯು 4 ನೇ ಪ್ರತಿವಾದಿ ಪರವಾಗಿ ದಾವಾ ಆಸ್ತಿಯ ಕುರಿತು ಕ್ರಯಪತ್ರವನ್ನು ಜಾರಿ ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಈ ಮೇಲೆ ಚರ್ಚಿಸಿದಂತೆ ದಾವಾ ಆಸ್ತಿಯಲ್ಲಿ ವಾದಿಗಳಿಗೆ ಮತ್ತು 2 ನೇ ಪ್ರತಿವಾದಿಗೆ ಹಕ್ಕು ಇರುವುದರಿಂದ ಸದರಿ **1** ನೇ ಪ್ರತಿವಾದಿಯು **3** ನೇ ಪ್ರತಿವಾದಿಯ ಪರವಾಗಿ ಜಾರಿ ಮಾಡಿಕೊಟ್ಟಿರುವ ಕ್ರಯ ಪತ್ರಕ್ಕೆ ವಾದಿಯರು ಮತ್ತು **2** ನೇ ಪ್ರತಿವಾದಿ ಪಕ್ಷಗಾರರಾಗಿರುವುದಿಲ್ಲ ಮತ್ತು ಸದರಿ ಕ್ರಯ ಪತ್ರಕ್ಕೆ ವಾದಿಯರು ಮತ್ತು **2** ನೇ ಪ್ರತಿವಾದಿಯರು ಸಮ್ಮತಿಯನ್ನು ಕೂಡ ನೀಡಿರುವುದಿಲ್ಲ**.** ಹಾಗಾಗಿ **1** ನೇ ಪ್ರತಿವಾದಿಯು **3** ನೇ ಪ್ರತಿವಾದಿಯ ಪರವಾಗಿ ದಿಃ **29-01-2016** ರಂದು ಜಾರಿ ಮಾಡಿಕೊಟ್ಟಿರುವ ಕ್ರಯ ಪತ್ರ ಮತ್ತು **3** ನೇ ಪ್ರತಿವಾದಿಯು **4** ನೇ ಪ್ರತಿವಾದಿಯ

ಪರವಾಗಿ ಜಾರಿ ಮಾಡಿಕೊಟ್ಟಿರುವ ಕ್ರಯ ಪತ್ರವು ವಾದಿಯರ ಮತ್ತು **2** ನೇ ಪ್ರತಿವಾದಿಯ ಹಿಸ್ಸೆಗೆ ಬಂಧನಕಾರಕವಾಗುವುದಿಲ್ಲ .

**17.** ಅಂತೆಯೇ ವಾದಿಯರು ದಾವಾ ಅನುಸೂಚಿತ ಸ್ವತ್ತಿನಲ್ಲಿ ತಲಾ 1/5 ಹಿಸ್ಸೆಯನ್ನು ಪಡೆಯಲು ಅರ್ಹರೆಂದು ತಮ್ಮ ಹಿಸ್ಸೆಯನ್ನು ಕೊಡಿಸಿಕೊಡುವಂತೆ ಕೋರಿರುತ್ತಾರೆ. ಈ ಕುರಿತು ವಾದಿಯರ ತಂದೆಯಾದ 1 ನೇ ಪ್ರತಿವಾದಿಗೆ ಎರಡು ಜನ ಗಂಡು ಮಕ್ಕಳು ಮತ್ತು ಎರಡು ಜನ ಹೆಣ್ಣು ಮಕ್ಕಳಿರುತ್ತಾರೆ. ಹಾಗಾಗಿ ದಾವಾ ಅನುಸೂಚಿತ ಸ್ವತ್ತಿನ ಕುರಿತು 5 ಹಿಸ್ಸೆಯನ್ನು ವಿಭಾಗ ಮಾಡುವಂತಹ ಅಗತ್ಯತೆ ಇರುತ್ತದೆ. ಸದರಿ 5 ಹಿಸ್ಸೆಯಲ್ಲಿ ವಾದಿಯರು ತಲಾ 1/5 ಹಿಸ್ಸೆಯನ್ನು ಪಡೆಯಲು ಹಕ್ಕನ್ನು ಹೊಂದಿರುತ್ತಾರೆ. 1 ನೇ ವಾದಿಯು ಮೃತಪಟ್ಟಿದ್ದು ಅವರ ವಾರಸುದಾರರಾದ 1(ಎ) ದಿಂದ 1(ಡಿ) ನೇ ವಾದಿಯರು ಒಟ್ಟಾಗಿ ತಮ್ಮ ತಂದೆಗೆ ಬರತಕ್ಕಂತಹ 1/5 ಹಿಸ್ಸೆಯನ್ನು ಪಡೆಯಲು ಅರ್ಹರಾಗಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ತಲಾ 1/5 ಹಿಸ್ಸೆಯನ್ನು ಪಡೆಯಲು ಹಕ್ಕನ್ನು ಹೊಂದಿರುತ್ತಾರೆ. 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಯ ಪರವಾಗಿ ದಾವಾ ಆಸ್ತಿಯ ಕುರಿತು ಜಾರಿ ಮಾಡಿಕೊಟ್ಟಿರುವ ಕ್ರಯ ಪತ್ರ ಮತ್ತು 3 ನೇ ಪ್ರತಿವಾದಿಯು 4 ನೇ ಪ್ರತಿವಾದಿಯ ಪರವಾಗಿ ದಾವಾ ಆಸ್ತಿಯ ಕುರಿತು ಮಾಡಿಕೊಟ್ಟಿರುವ ಕ್ರಯ ಪತ್ರವು ವಾದಿಯರ ಮತ್ತು 2 ನೇ ಪ್ರತಿವಾದಿಯ ಹಿಸ್ಸೆಗೆ ಬಂಧನಕಾರಕವಾಗುವುದಿಲ್ಲ. 1 ನೇ ಪ್ರತಿವಾದಿಯ ಹಿಸ್ಸೆಯನ್ನು ಅಂತಿಮ ಡಿಕ್ರಿಯಲ್ಲಿ 4 ನೇ ಪ್ರತಿವಾದಿಯ ಪಡೆಯಲು ಹಕ್ಕನ್ನು ಹೊಂದಿರುತ್ತಾರೆ. ಹಾಗಾಗಿ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಅಂಶ ಸಂಖ್ಯೆ 1 ಹಾಗೂ 2 ನ್ನು ಸಕಾರಾತ್ಮಕವೆಂದು ನಿರ್ಣಯಿಸಲಾಗುತ್ತದೆ.

**18.** <u>ಅಂಶ ಸಂಖ್ಯೆ **-3ಃ-**</u> ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ನಿರ್ಣಯಿಸಲಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

<u>ಆದೇಶ</u>

ವಾದಿಯರು ಸಲ್ಲಿಸಿರುವ ದಾವೆಯನ್ನು ಈ ಕೆಳಗಿನಂತೆ ಡಿಕ್ರಿ ಮಾಡಲಾಗಿದೆ.

1 (ಎ) ದಿಂದ 1 (ಡಿ) ನೇ ವಾದಿಯರು ದಾವಾ ಅನುಸೂಚಿತ ಸ್ವತ್ತಿನಲ್ಲಿ ಒಟ್ಟಾಗಿ 1/5 ಹಿಸ್ಸೆಯನ್ನು, 2 ಮತ್ತು 3 ನೇ ವಾದಿಯರು ತಲಾ 1/5 ಹಿಸ್ಸೆಯನ್ನು ಹಾಗೂ 1 ಮತ್ತು 2 ನೇ ಪ್ರತಿವಾದಿಯರು ತಲಾ 1/5 ಹಿಸ್ಸೆಯನ್ನು ಪಡೆಯಲು ಅರ್ಹರಿರುತ್ತಾರೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ದಿನಾಂಕ 13.06.2022 ರ ಗೌರವಾನ್ವಿತ ಸರ್ವೋಚ್ಚ ನ್ಯಾಯಲಯದ ತೀರ್ಪು 2022 SCC Online SC 737 (Kattukandi Edathil Krishnan versus Kattukandi Edathil Valson) ಪ್ರಕಾರ ಸಿವಿಲ್ ಪ್ರಕ್ರಿಯ ಸಂಹಿತೆ ಆದೇಶ XX ನಿಯಮ 18 ರ ಅಡಿಯಲ್ಲಿ ಈ ದಾವೆಯ ಮುಂದುವರೆದ ಕ್ರಮಗಳನ್ನು ತೆಗೆದುಕೊಳ್ಳಲು ವಿಷಯವನ್ನು ಪಟ್ಟಿ ಮಾಡಿತಕ್ಕದ್ದು.

ಸಿ.ಐ.ಎಸ್. ನಲ್ಲಿನ ತಾಂತ್ರಿಕತೆಗಳನ್ನು ತಪ್ಪಿಸುವ ಸಲುವಾಗಿ ಹೊಸ ಸಂಖ್ಯೆ ನೀಡುವುದರ ಮೂಲಕ ಎಫ್.ಡಿ.ಪಿ. ಎಂದು ನೊಂದಾವಣೆ ಮಾಡಲು ಕಛೇರಿಗೆ ನಿರ್ದೇಶಿಸಿದೆ.

ಎಫ್.ಡಿ.ಪಿ. ಪ್ರಕರಣವನ್ನು ನ್ಯಾಯಾಲಯದಲ್ಲಿ 17.10.2026 ದಿನಾಂಕದಂದು ಕರೆಯತಕ್ಕದ್ದು.

ಈ ಮೇಲಿನಂತೆ ಪ್ರಾಥಮಿಕ ಡಿಕ್ರಿ ಬರೆಯತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ: 23 ನೇ ಜುಲೈ 2026 ರಂದು ನಾನು ಉದ್ಘೋಷಿಸಿದ್ದೇನೆ.)

(ಈರಪ್ಪ ಢವಳೇಶ್ವರ್)
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ

ಅನುಬಂಧ

ವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

ಪಿ.ಡಬ್ಲ್ಯೂ.1-ಪ್ರಕಾಶ ತಂದೆ ರಂಗಪ್ಪ ಹಡಪದ ಯಾನೆ ನಾದಗೇರ

ವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

ನಿ.ಪಿ.1-ಪಹಣಿ ಪತ್ರಿಕೆ

ನಿ.ಪಿ.2- ಹಕ್ಕು ಬದಲಾವಣೆ ವಹಿಯ ದೃಢಿಕೃತ ನಕಲು ಪ್ರತಿ

ನಿ.ಪಿ.3-4- ಖರೀದಿ ಕ್ರಯ ಪತ್ರಗಳು

ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:-

---ಇಲ್ಲ---

ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:-

---ಇಲ್ಲ---

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಬಸವನ ಬಾಗೇವಾಡಿ